

# ಬೆಳಕಿಗೆ ಬಾರದ ಕಲಾವಿದ ಗೋವಿಂದ ಬೇಂದ್ರೆ

■ ಪಿ.ಬಿ. ಗವಾನಿ

**ಕ**ಲೆಯನ್ನು ಒಂದು ತಪಸ್ಸು ಎಂದು ತಿಳಿದು ಕಲೆಯಲ್ಲಿಯೇ ತಮ್ಮ ಜೀವನವನ್ನು ಕಂಡುಕೊಳ್ಳಲು ಪ್ರಯತ್ನಿಸಿ, 77ರ ಇಳಿ ವಯಸ್ಸಿನಲ್ಲಿ ಶ್ರದ್ಧೆಯಿಂದ ಕಾಯಕ ಮುಂದುವರೆಸಿರುವ ಗೋವಿಂದ ಬೇಂದ್ರೆ ಒಬ್ಬ ಕಲಾ ರಸಋಷಿ. ಯಾವುದೇ ಪ್ರಚಾರ ಬಯಸದೇ ಪ್ರಶಸ್ತಿ ಪುರಸ್ಕಾರಗಳಿಗೆ ಆಸೆ ಪಡದೆ, ಎಲೆಯ ಮರೆಯ ಕಾಯಿಯಂತೆ ನಿರಂತರವಾಗಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಸಾಂಸ್ಕೃತಿಕ ನಗರ ಧಾರವಾಡದಲ್ಲಿ ದಿನಾಂಕ 1932ರ ಡಿಸೆಂಬರ್ 7ರಂದು ಗೋವಿಂದ ಬೇಂದ್ರೆ ಜನಿಸಿದರು. ತಂದೆ ಯಶವಂತ ಬೇಂದ್ರೆ, ತಾಯಿ ಶಾರದಾದೇವಿ. ತಂದೆಯವರು ಬ್ರಿಟಿಷರ ಕಾಲದಲ್ಲಿ ಬಿಲ್ಡಿಂಗ್ ನಕಾಶೆಯನ್ನು ತೆಗೆಯುವ ಇಂಜಿನಿಯರ್ ಆಗಿದ್ದರು. 1964ರಲ್ಲಿ ತಂದೆ ತೀರಿಕೊಂಡಾಗ 11 ವರ್ಷದ ಬಾಲಕನ ಮೇಲೆ ಮನೆಯ ಜವಾಬ್ದಾರಿ ಬಿತ್ತು.

(8ನೇ ಪುಟ ನೋಡಿ)